**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಗುಂಡ್ಲುಪೇಟೆ**

**ಸಿ.ಸಿ ನಂ.755/2025**

**ಫಿರ್ಯಾದುದಾರರು** : ಕರ್ನಾಟಕ ರಾಜ್ಯದ ಪರವಾಗಿ
ಗುಂಡ್ಲುಪೇಟೆ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿ** : ಮಹೇಶ ಮತ್ತು ಇನ್ನೊಬ್ಬರು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ದಾಖಲಿಸಿಕೊಂಡ ಆರೋಪಿಯ ಹೇಳಿಕೆ**

ಆರೋಪಿಯ ಹೆಸರು : ಮಹೇಶ
ತಂದೆಯ ಹೆಸರು : ದೇವಪ್ಪ
ವಯಸ್ಸು : 40 ವರ್ಷ
ವಾಸ : ಕಂದೇಗಾಲದ ಹೊಸೂರು ಗ್ರಾಮ
ಗುಂಡ್ಲುಪೇಟೆ ತಾಲ್ಲೂಕು.

**ಪ್ರಶ್ನೆ – 1** : ಇದುವರೆವಿಗೂ ಅಭಿಯೋಜನೆಯವರ ಪರ ಹೇಳಿಕೆ ಕೊಟ್ಟಿರುವ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?

**ಉತ್ತರ** :

**ಪ್ರಶ್ನೆ – 2 : ಚಾಸಾ–1/ಪ್ರಾಸಾ–1 ಮುತ್ತಮ್ಮ ರವರು ತಮ್ಮ ಸಾಕ್ಷ್ಯದಲ್ಲಿ**, ಚಾಸಾ–4 ತನ್ನ ಗಂಡ, ಚಾಸಾ–2, 3 ಮತ್ತು 5 ರವರ ಪರಿಚಯವಿರುತ್ತದೆ, ಆರೋಪಿಗಳಾದ ನಿಮ್ಮ ಪರಿಚಯವಿರುತ್ತದೆ, ತಮ್ಮ ಮತ್ತು ಆರೋಪಿಗಳ ನಡುವೆ ದಾರಿ ವಿಚಾರವಾಗಿ ದಾವೆ ದಾಖಲುಪಡಿಸಿರುತ್ತೇನೆ, ಈಗ್ಗೆ ಮೂರು ವರ್ಷಗಳ ಹಿಂದೆ

ಸಂಜೆ 6.00 ಗಂಟೆ ಸುಮಾರಿಗೆ ತಾನು ತನ್ನ ಜಮೀನಿನಿಂದ ಬರುತ್ತಿರುವಾಗ, ಮಹೇಶ ಮತ್ತು ನಾಗಲಾಂಬಿಕೆ ತಮ್ಮ ಜಾಗದಲ್ಲಿ ಕಸಕಡ್ಡಿಗಳನ್ನು ಸುರಿಯುತ್ತಿದ್ದರು, ತಾನು ಕಸ ಹಾಕಿರುವ ಬಗ್ಗೆ ಕೇಳಲಾಗಿ, ತನಗೆ ಅವಾಚ್ಯ ಶಬ್ದಗಳಿಂದ ಬೈದರು, ಆರೋಪಿಗಳಾದ ನೀವುಗಳು ದಬ್ಬೆಯಿಂದ ತನ್ನ ತಲೆ ಮತ್ತು ಮೈಕೈಗೆ ಹೊಡೆದಿರುತ್ತೀರಿ, ಆಗ ತನ್ನ ಗಂಡ, ದೊರೆಶ್ ಮತ್ತು ಬೆಳ್ಳಪ್ಪ ಎಂಬುವರು ಬಂದು ಜಗಳ ಬಿಡಿಸಿರುತ್ತಾರೆ, ನಂತರ ಆರೋಪಿಗಳಾದ ನೀವುಗಳು ತನ್ನನ್ನು ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 3 : ಪ್ರಾಸಾ–1 ರವರು ಮುಂದುವರೆದ ತಮ್ಮ ಮುಖ್ಯ ವಿಚಾರಣೆಯಲ್ಲಿ**, ತನ್ನ ಗಂಡ ತನ್ನನ್ನು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ, ಮೂರು ದಿನಗಳ ಕಾಲ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ, ಈ ಬಗ್ಗೆ ಆರೋಪಿಗಳಾದ ನಿಮ್ಮ ವಿರುದ್ಧ ನಿಪಿ–1 ರಂತೆ ದೂರನ್ನು ನೀಡಿರುತ್ತೇನೆ, ಆರೋಪಿಗಳಾದ ನೀವುಗಳು ತನಗೆ ಹೊಡೆಯಲು ಉಪಯೋಗಿಸಿದ ದೊಣ್ಣೆಯನ್ನು ಮುದ್ದೆ ಮಾಲು–1 ಎಂದು ನೋಡಿ ಗುರುತಿಸಿರುವುದಾಗಿ, ಆ ದಿನ ತನ್ನ ಜೊತೆ ಗಲಾಟೆ ಮಾಡಿದ ಆರೋಪಿಗಳಾದ ನಿಮ್ಮನ್ನು ನೋಡಿದರೆ ಗುರುತಿಸುವುದಾಗಿ, ತಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 4 : ಚಾಸಾ–4/ಫ್ರಾಸಾ–4 ಸುಬ್ಬಣ್ಣರವರು ತಮ್ಮ ಸಾಕ್ಷ್ಯದಲ್ಲಿ**, ಚಾಸಾ 1 ತನ್ನ ಹೆಂಡತಿ, ಚಾಸಾ 2, 3 ಮತ್ತು 5 ಗೊತ್ತು, ಆರೋಪಿಗಳಾದ ನೀವುಗಳು ಗೊತ್ತು, ತಮ್ಮೂರಿನವರು, ಆರೋಪಿಗಳಾದ ನೀವು ಮನೆ ಮತ್ತು ತಮ್ಮ ಮನೆ ಅಕ್ಕಪಕ್ಕದಲ್ಲಿ ಇರುತ್ತದೆ, 2021ನೇ ಇಸವಿಯಲ್ಲಿ ಸಂಜೆ 6.00 ಗಂಟೆ ಸಮಯದಲ್ಲಿ ತಮ್ಮ ಜಾಗದಲ್ಲಿ ತಮ್ಮನ್ನು ಕಸ ಹಾಕಬೇಡಿ ಎಂದು ಆರೋಪಿಗಳಾದ ನೀವುಗಳು ಹೇಳಿದ್ದು, ಚಾಸಾ 1 ರವರಿಗೆ ಸೂಳೆ ಮುಂಡೆ ಎಂದು ಅವಾಚ್ಯ ಶಬ್ಧಗಳಿಂದ ಬೈದು, 1ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ 1 ರವರಿಗೆ ಹೊಡೆದಿದ್ದು, ಅದೇ ದೊಣ್ಣೆಯಿಂದ 2ನೇ ಆರೋಪಿಯಾದ ನೀವು ಚಾಸಾ 1 ರವರಿಗೆ ಹೊಡೆದಿರುತ್ತೀರಿ, ಆಗ ಚಾಸಾ 1 ರವರು ಕೂಗಿಕೊಂಡಾಗ ತಾನು ಮತ್ತು ಊರಿನವರು ಹೋಗಿ ಜಗಳ ಬಿಡಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 5 : ಫ್ರಾಸಾ–4 ರವರು ಮುಂದುವರೆದ ತಮ್ಮ ಮುಖ್ಯ ವಿಚಾರಣೆಯಲ್ಲಿ**, ಆರೋಪಿಗಳಾದ ನೀವುಗಳು ಚಾಸಾ 1 ರವರನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತೀರಿ, ನಂತರ ತಾನು ಚಾಸಾ 1 ರವರನ್ನು ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ಹೋಗಿದ್ದು ಪೊಲೀಸರು ಆಸ್ಪತ್ರೆಗೆ ಹೋಗಿ ಬನ್ನಿ ಎಂದು ತಿಳಿಸಿದ ಮೇರೆಗೆ ಆಸ್ಪತ್ರೆಗೆ ಹೋಗಿ ಬಂದು ನಂತರ ಪೋಲಿಸರಿಗೆ ದೂರು ನೀಡಿರುತ್ತಾರೆ, ದೂರು ನೀಡಿದ 4–5 ದಿನಗಳ ನಂತರ ಪೊಲೀಸರು ಗಲಾಟೆಯಾದ ಸ್ಥಳಕ್ಕೆ ಬಂದಿದ್ದು, ತಾನು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ 12.00 ಗಂಟೆಯ ವರೆಗೆ ಸ್ಥಳ ಪಂಚನಾಮೆ ಜರುಗಿಸಿ, ಮುದ್ದೆ ಮಾಲು 1 ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ, ನಿಪಿ 2 ಪಂಚನಾಮೆಗೆ ನಿಪಿ

2(ಸಿ) ರಂತೆ ಸಹಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 6 : ಚಾಸಾ–6/ಫ್ರಾಸಾ–5 ಡಾ. ಪಿ ಲಲಿತಾ ರವರು ತಮ್ಮ ಸಾಕ್ಷ್ಯದಲ್ಲಿ**, ದಿಃ 25.10.2022 ರಂದು ರಾತ್ರಿ 8.15 ರ ಸಮಯದಲ್ಲಿ ಚಾಸಾ 1 ರವರು ಸಂಜೆ 6.00 ಗಂಟೆ ಸಮಯದಲ್ಲಿ ಮಹೇಶ ಮತ್ತು ರಶ್ಮಿ ಎಂಬುವವರಿಂದ ಹಲ್ಲೆಯಾಗಿದೆ ಎಂದು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ತಾನು ಪರೀಕ್ಷಿಸಲಾಗಿ ತಲೆಯ ಎಡಭಾಗದಲ್ಲಿ 1 x 2 ಸೆ.ಮೀ ಅಳತೆಯ ರಕ್ತಗಾಯವಾಗಿದ್ದು, ರಕ್ತ ಹೊರಬರುತ್ತಿತ್ತು, ಈ ಗಾಯಕ್ಕೆ ತಾನು ಚಿಕಿತ್ಸೆ ನೀಡಿ ಸದರಿ ಗಾಯವು ಸಾಮಾನ್ಯ ಸ್ವರೂಪದ್ದು ಎಂದು ನಿಪಿ–3 ರಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ, ಅದಕ್ಕೆ ನಿಪಿ 3(ಎ) ರಂತೆ ಸಹಿ ಮಾಡಿರುವುದಾಗಿ, ಮುದ್ದೆ ಮಾಲು 1 ದೊಣ್ಣೆಯಿಂದ ಹೊಡೆದಾಗ ನಿಪಿ 3 ರಲ್ಲಿ ಹೇಳಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 7 : ಚಾಸಾ–8/ಫ್ರಾಸಾ–6 ಎಂ. ಎಸ್ ಶಿವಶಂಕರಪ್ಪ ರವರು ತಮ್ಮ ಸಾಕ್ಷ್ಯದಲ್ಲಿ**, ದಿಃ 30.10.2021 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ 1 ದೂರನ್ನು ಸ್ವೀಕರಿಸಿ ಠಾ.ಮೊ. ಸಂಖ್ಯೆ 309/2021 ರಂತೆ ಪ್ರಕರಣ ದಾಖಲಿಸಿ ನಿಪಿ–4 ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ

ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ, ದಿಃ 04.11.2021 ರಂದು ಚಾಸಾ 4 ರವರು ತೋರಿಸಿದ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡಿ ವಿಷಯ ತಿಳಿಸಿ ಅವರು ಒಪ್ಪಿದ ಮೇರೆಗೆ ಬೆಳಿಗ್ಗೆ 11 ರಿಂದ 11.45 ಗಂಟೆಯವರೆಗೆ ಪಂಚನಾಮೆ ಸಾಕ್ಷಿಗಳ ಸಮಕ್ಷಮ ನಿಪಿ 2 ಸ್ಥಳ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ, ಅದಕ್ಕೆ ನಿಪಿ 2(ಡಿ) ರಂತೆ ಸಹಿ ಮಾಡಿರುತ್ತೇನೆ, ನಿಪಿ 2 ರ ಸಮಯದಲ್ಲಿ ಚಾಸಾ 1 ರವರು ಹಾಜರುಪಡಿಸಿದ ಮುದ್ದೆ ಮಾಲು 1 ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ, ಅದೇ ದಿನ ನಂತರ ಠಾಣೆಗೆ ಬಂದು ಮುದ್ದೆ ಮಾಲನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ, ನಂತರ ಚಾಸಾ 4 ಮತ್ತು 5 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 8 : ಫ್ರಾಸಾ–6 ರವರು ಮುಂದುವರೆದ ತಮ್ಮ ಮುಖ್ಯ ವಿಚಾರಣೆಯಲ್ಲಿ**, ದಿನಾಂಕ 06.11.2021 ರಂದು ಚಾಸಾ 1 ರವರ ಮರು ಹೇಳಿಕೆ ದಾಖಲಿಸಿರುತ್ತೇನೆ, ದಿನಾಂಕ 10.11.2021 ರಂದು ಆರೋಪಿಗಳಾದ ನೀವುಗಳು ಠಾಣೆಗೆ ಹಾಜರಾದ ಮೇರೆಗೆ ಕಲಂ 41(ಎ) ದಂಡ ಪ್ರಕ್ರೀಯ ಸಂಹಿತೆಯಡಿ ನೋಟೀಸ್ ಜಾರಿ ಮಾಡಿ, ಜಾಮೀನಿನ ಮೇರೆಗೆ ಬಿಟ್ಟಿರುತ್ತೇನೆ, ದಿನಾಂಕ 26.02.2022 ರಂದು ಚಾಸಾ 1 ರವರ ಬಾಬ್ತು ನಿಪಿ 3 ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ, ತನಿಖೆ ಪೂರ್ಣಗೊಂಡಿದ್ದು ಆರೋಪಿಗಳಾದ ನಿಮ್ಮ ವಿರುದ್ಧ ಆರೋಪ ಸಾಬೀತಾದ್ದರಿಂದ ದೋಷಾರೋಪಣಾ ಪಟ್ಟಿ

ಸಲ್ಲಿಸಿರುತ್ತೇನೆ, ಆರೋಪಿಗಳಾದ ನಿಮ್ಮನ್ನು ನೋಡಿದರೆ ಗುರುತಿಸುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ** –9: ಮೊಕದ್ದಮೆಯಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ?

**ಉತ್ತರಃ**

**ಪ್ರಶ್ನೆ**– 10 : ಈ ಮೊಕದ್ದಮೆಯಲ್ಲಿ ನೀವು ಮತ್ತೇನಾದರೂ ಹೇಳುವುದಿದೆಯೇ?

**ಉತ್ತರಃ**

(ದಿನಾಂಕಃ 04.06.2026 ರಂದು ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ನನ್ನ ಸಮಕ್ಷಮ ಪಡೆದುಕೊಂಡು ಮೇಲ್ಕಂಡ ಪ್ರಶ್ನೆಗಳಿಗೆ ಆರೋಪಿಯು ತಮ್ಮ ಸ್ವ ಇಚ್ಛೆಯಿಂದ ಹೇಳಿಕೆ ಕೊಟ್ಟಿರುತ್ತಾರೆ ಎಂದು ನಾನು ದೃಢಪಡಿಸುತ್ತೇನೆ)

**(ದೀಪು ಎಂ ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

**1ನೇ ಆರೋಪಿಯ ಸಹಿ** :